ಕರ್ನಾಟಕ ವಿಧಾನ ಸಭೆ

ಗುರುವಾರ 22ನೇ ಜುಲೈ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12-00 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

1) ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರ

ಸಭಾಧ್ಯಕ್ಷರು : ಈಗ ಪ್ರಶ್ನೋತ್ತರ, ಶ್ರೀ ಹೆಚ್. ಆಂಜನೇಯ ರವರೆ ತಾವು 91 ನೇ ಪ್ರಶ್ನೆ ಕೇಳಿ.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಕೊಡದೇ ಇದ್ದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ.

ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಕೆರೆಗಳನ್ನು ಹೊಳೆತ್ತುವ ಕಾರ್ಯಕ್ರಮ

31(91) : ಶ್ರೀ ಹೆಚ್. ಆಂಜನೇಯ (ಭರಮ ಸಾಗರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿನ ಯಾವ ಯಾವ ಕರೆಗಳನ್ನು ಹೊಳೆತ್ತುವ ಕಾರ್ಯಕ್ರಮದಡಿಯಲ್ಲಿ ತರಲಾಗಿದೆ: (ಕಳೆದ 3 ವರ್ಷಗಳ ವಿವರ ಒದಗಿಸುವುದು);

ಆ) ಈ ಕಾರ್ಯಕ್ರಮಗಳಿಗೆ ನಿಗದಿಗೊಳಿಸಿದ ಹಣವೆಷ್ಟು; (ಕೆರೆವಾರು ವಿವರಗಳನ್ನು ಒದಗಿಸುವುದು);

ಇ) ಸದರಿ ಕಾಮಗಾರಿಯನ್ನು ಕೈಗೊಂಡ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕಗಳು ಯಾವುವು; ಈಗ ಯಾವ ಯಾವ ಕೆರೆಗಳು ಯಾವ ಯಾವ ಹಂತದಲ್ಲಿವೆ;

ಈ) ಹೊಳೆತ್ತುವ ಕಾರ್ಯವನ್ನು ಯಾರಿಗೆ ವಹಿಸಲಾಗಿರುತ್ತದೆ: ಹಾಗೂ ಅವರಿಗೆ ಪಾವತಿಸಲಾಗಿರುವ ಹಣದ ವಿವರಗಳೇನು: (ಕೆರೆವಾರು ಮತ್ತು ವೆಚ್ಚವಾರು ವಿವರಗಳನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಆ) ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ಕೆಳಕಂಡ 4 ಕಾಮಗಾರಿಗಳನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿರುತ್ತದೆ.

1. ಕೊಡಗನೂರು ಕೆರೆಶ್ರ 2. ಸವಳಂಗೆ ಕೆರೆ
3. ಅರಸೀಕೆರೆ ಕೆರೆ 4. ಜಗಳೂರು ಕೆರೆ

ಉಳಿದ ಹೊಳೆತ್ತುವ ಕಾಮಗಾರಿಗಳನ್ನು ಇಲಾಖಾ ಮಟ್ಟದಿಂದ ಕೈಗೊಳ್ಳಲಾಗಿದೆ. ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ದಾವಣಗೆರೆ ಜಿಲ್ಲೆಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ

ಕ್ರ. ಸಂ.	ತಾಲ್ಲೂಕು	ಕೆರೆಯ ಹೆಸರು	ಅಂದಾಜಿನಂತೆ ಹೊಳೆತ್ತುವ ನಿಗದಿಪಡಿಸಿದ ಹಣ ರೂ. ಲಕ್ಷಗಳಲ್ಲಿ	ಖರ್ಚು ಮಾಡಲಾದ ಹಣ (ರೂ. ಲಕ್ಷಗಳಲ್ಲಿ)	ಹೊಳೆತ್ತುವ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ	ಹೊಳೆತ್ತುವ ಕಾಮಗಾರಿಯನ್ನು ಪೂರ್ಣಗೊಳಿಸಿದ ದಿನಾಂಕ	ಹೊಳೆತ್ತುವ ಕಾಮಗಾರಿಯ ಹಂತ
ರೈತ ಕಾಯಕ ಕೆರೆ ಕಾಮಗಾರಿಗಳು 2002–03							
1.	ದಾವಣಗೆರೆ	ಕೊಡಗನೂರು ಕೆರೆ	6.60	14.30	02.05.2002	20.05.2002	ಪೂರ್ಣಗೊಂಡಿದೆ
2.	ಚನ್ನೇರಿ	ಸಂತೆಬೆನ್ನೂರು ಊರ ಮುಂದಿನ	1.80	1.91	01.02.2003	31.03.2003	ಪೂರ್ಣಗೊಂಡಿದೆ
2003–04							
1.	ಹರಪನಹಳ್ಳಿ	ಅರಸೀಕೆರೆ	3.70	3.70	01.02.2003	30.03.2003	ಪೂರ್ಣಗೊಂಡಿದೆ
2.	ಹೊನ್ನಾಳಿ	ಸೌಳಂಗ ಕೆರೆ	24.00	23.00	20.04.2002	31.05.2002	ಪೂರ್ಣಗೊಂಡಿದೆ
		ಜಿಲ್ಲಾಧಿಕಾರಿಗಳ ಬರಪರಿಹಾರ ನಿಧಿಯಲ್ಲಿನ ಕಾಮಗಾರಿಗಳು					
1.	ದಾವಣಗೆರೆ	ಅಣಜಿಬಿಚ್ಚಕೆರೆ	2.32	2.32	01.04.2004	30.04.2004	ಪೂರ್ಣಗೊಂಡಿದೆ
2.	ಚನ್ನೇರಿ	ಹೊರಿಗೆರೆ ಕೆರೆ	1.65	1.65	01.04.2004	30.04.2004	ಪೂರ್ಣಗೊಂಡಿದೆ
3.	ಹರಪನಹಳ್ಳಿ	ಎಡೇಹಳ್ಳಿಕೆರೆ	1.40	1.40	01.04.2004	30.04.2004	ಪೂರ್ಣಗೊಂಡಿದೆ
4.	ಜಗಳೂರು	ಮಲೆಮಾಚಿಕೆರೆ ಕೆರೆ	1.95	1.95	01.04.2004	30.04.2004	ಪೂರ್ಣಗೊಂಡಿದೆ
5.	ಹೊನ್ನಾಳಿ	ಕೋಣನತಲೆ ಕೆರೆ	2.30	2.30	01.04.2004	30.04.2004	ಪೂರ್ಣಗೊಂಡಿದೆ
		ಒಟ್ಟು	**45.72**	**52.53**	-	-	

ಅನುಬಂಧ

ಚಿತ್ರದುರ್ಗ ಜಿಲ್ಲೆಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ

ಕ್ರ. ಸಂ.	ತಾಲ್ಲೂಕು	ಕೆರೆಯ ಹೆಸರು	ಅಂದಾಜಿನಂತೆ ಹೊಳೆತ್ತುವ ನಿಗದಿಪಡಿಸಿದ ಹಣ ರೂ. ಲಕ್ಷಗಳಲ್ಲಿ	ಖರ್ಚು ಮಾಡಲಾದ ಹಣ (ರೂ. ಲಕ್ಷಗಳಲ್ಲಿ)	ಹೊಳೆತ್ತುವ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ	ಹೊಳೆತ್ತುವ ಕಾಮಗಾರಿಯನ್ನು ಪೂರ್ಣಗೊಳಿಸಿದ ದಿನಾಂಕ	ಹೊಳೆತ್ತುವ ಕಾಮಗಾರಿಯ ಹಂತ
		ರೈತ ಕಾಯಕ ಕೆರೆ ಕಾಮಗಾರಿಗಳು 2002-03 ಯಾವುದೂ ಇಲ್ಲಾ					
		2003 - 04					
1.	ಚಿತ್ರದುರ್ಗ	ಅನ್ನೆಹಾಳ ಕೆರೆ	4.00	–			ಪ್ರಾರಂಭಿಸಿಲ್ಲ
2.	ಚಿತ್ರದುರ್ಗ	ಗೋನೂರು ಕೆರೆ	2.40	0.33	09.02.2004	28.03.2004	ಪೂರ್ಣಗೊಂಡಿದೆ
3.	ಹೊಳಲ್ಕೆರೆ	ಚಿಕ್ಕೆಮ್ಮಿಗನೂರು ಕೆರೆ	3.20	1.71	01.05.2003	31.05.2003	ಪೂರ್ಣಗೊಂಡಿದೆ
4.	ಹೊಸದುರ್ಗ	ಬೆಲಗೂರು ಕೆರೆ	1.56	1.55	01.05.2003	31.05.2003	ಪೂರ್ಣಗೊಂಡಿದೆ
5.	ಚಳ್ಳಕೆರೆ	ಟಿ.ಎನ್. ಕೋಟೆಕೆರೆ	1.86	1.89	01.04.2003	30.04.2003	ಪೂರ್ಣಗೊಂಡಿದೆ
6.	ಚಳ್ಳಕೆರೆ	ನಾಯಕನಹಟ್ಟಿ ಕೆರೆ	3.00	3.00	01.04.2003	30.04.2003	ಪೂರ್ಣಗೊಂಡಿದೆ
7.	ಹಿರಿಯೂರು	ಭರಮಗಿರಿ ಕೆರೆ	2.40	2.44	15.08.2003	11.09.2003	ಪೂರ್ಣಗೊಂಡಿದೆ
		ಜಿಲ್ಲಾಧಿಕಾರಿಗಳ ಬರಪರಿಹಾರ ನಿಧಿಯಲ್ಲಿನ ಕಾಮಗಾರಿಗಳು					
1.	ಚಿತ್ರದುರ್ಗ	ಇಸ್ಲಾಮುದ್ರಕೆರೆ	2.00	2.00	01.04.2004	30.04.2004	ಪೂರ್ಣಗೊಂಡಿದೆ
2.	ಚಳ್ಳಕೆರೆ	ಪಿ. ಮಹಾದೇವಪುರ ಕೆರೆ	1.70	1.15	15.04.2004	30.04.2004	ಪೂರ್ಣಗೊಂಡಿದೆ
3.	ಹಿರಿಯೂರು	ಖೂನಿಕೆರೆ	1.85	1.85	04.04.2004	30.04.2004	ಪೂರ್ಣಗೊಂಡಿದೆ
4.	ಹೊಳಲ್ಕೆರೆ	ದೇವರ ಹೊಸಹಳ್ಳಿಕೆರೆ	2.00	0.00			ಪ್ರಾರಂಭಿಸಿಲ್ಲ
5.	ಹೊಸದುರ್ಗ	ಗಂಜಿಗೆರೆ ಕೆರೆ	1.50	1.50	22.05.2004	15.06.2004	ಪೂರ್ಣಗೊಂಡಿದೆ
6.	ಮೊಳಕಾಲ್ಮೂರು	ಭಟ್ರಹಳ್ಳಿಕೆರೆ	3.00	2.93	01.04.2004	27.04.2004	ಪೂರ್ಣಗೊಂಡಿದೆ
		ಒಟ್ಟು	**30.47**	**20.35**			

ಶ್ರೀ ಹೆಚ್. ಅಂಜನೇಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಲಸಂಪನ್ಮೂಲ ಸಚಿವರು ಇಲ್ಲಿ ಕೆಲವು ಉತ್ತರಗಳನ್ನು ಕೊಟ್ಟಿದ್ದಾರೆ. ನಾನು ನೋಡಿದೆ, ಒಂದು ಕೆರೆ ಬಹಳ ಮುಖ್ಯವಾಗಿರತಕ್ಕಂಥಾದ್ದು ದಾವಣಗೆರೆಯಲ್ಲಿ ಮುಂದವಾಡ ಕೆರೆ ಹೊಳೆತ್ತುವ ಕಾಮಗಾರಿಯ ಕೆಲಸ ನಡೆದಿದೆ. ಅದಕ್ಕೆ ಬಹಳ ಹಣವನ್ನು ವೆಚ್ಚ ಮಾಡಿ ಆ ಕೆರೆಯನ್ನು ನಿರ್ಮಾಣ ಮಾಡಿದ್ದಾರೆ ಎಂದು ನಮಗೆ ಗೊತ್ತಾಗಿದೆ. ಅದರ ಪೂರ್ಣ ವಿವರ ಇಲ್ಲಿ ಬಂದಿಲ್ಲ. ಈಗ ಆ ಒಂದು ಕೆರೆ ಹೊಳೆತ್ತಿದ ಮೇಲೆ ದಾವಣಗೆರೆಯಲ್ಲಿ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಆ ಕೆರೆಯನ್ನು ಉಪಯೋಗ ಮಾಡಿಕೊಂಡಿದ್ದಾರೆ. ಈ ಕಾಮಗಾರಿಗೆ ಎಷ್ಟು ವೆಚ್ಚವಾಯಿತು ಎನ್ನುವುದರ ಬಗ್ಗೆ ನಮ್ಮ ದಾವಣಗೆರೆಯಲ್ಲಿ ಚರ್ಚೆ ನಡೆಯುತ್ತಿದೆ. ಅಲ್ಲಿ ಕೋಟ್ಯಾಂತರ ರೂಪಾಯಿ ಹಣ ವೆಚ್ಚ ಮಾಡಿ ಆ ಕೆರೆಯನ್ನು ನಿರ್ಮಾಣ ಮಾಡಿದ್ದಾರೆ. ಈ ಕೆಲಸವನ್ನು ನಗರಸಭೆಯವರು ಮಾಡಿದ್ದಾರಾ? ಖಾಸಗಿಯವರು ಮಾಡಿದ್ದಾರಾ ಅಥವಾ ಲ್ಯಾಂಡ್ ಆರ್ಮಿಯವರು ಮಾಡಿದರೋ, ಯಾರು ಮಾಡಿದರು ಎನ್ನುವುದೂ ಕೂಡ ನಮಗೆ ಸರಿಯಾದ ಮಾಹಿತಿ ಇಲ್ಲ. ಆ ಕೆರೆಯನ್ನು ಯಾವ ಯೋಜನೆಯಲ್ಲಿ ಕೈಗೆತ್ತಿಕೊಂಡರು? ಅದರ ಪೂರ್ಣ ವೆಚ್ಚ ಎಷ್ಟು ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು ಎಂದು ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ದಾವಣಗೆರೆಯಲ್ಲಿ ಒಂದು ಕೊಡಗನೂರು ಕೆರೆ ಹಾಗೂ ಇನ್ನೊಂದು ಚೆನ್ನೇರಿ ಕೆರೆ ಎಂದು ಎರಡು ಕೆರೆಗಳು ಮಾತ್ರ ಕಾಮಗಾರಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಅದೇರೀತಿಯಾಗಿ ಹರಪನಹಳ್ಳಿ, ಹೊನ್ನಾಳಿ ಮತ್ತು ಜಗಳೂರಿನಲ್ಲಿ ಒಂದು ಈ ರೀತಿಯಾಗಿ ಕೆಲವು ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕೂಡ ಸುಮಾರು ಏಳು ಕೆಲಸಗಳನ್ನು ನಾವು ತೆಗೆದುಕೊಂಡಿದ್ದೇವೆ. ಅದಕ್ಕೆ ಅಂದಾಜಿನ ಪ್ರಕಾರ ನಿಗದಿ ಪಡಿಸಲಾದ ಎಸ್ಟಿಮೇಟ್ ಎಂದರೆ ಸುಮಾರು 6 ಲಕ್ಷ 60 ಸಾವಿರ ರೂಪಾಯಿಗಳು. ಹಾಗೂ ಅದರಲ್ಲಿ ಖರ್ಚು ಮಾಡಿರುವ ಹಣ 14 ಲಕ್ಷ ರೂಪಾಯಿಗಳು. ಹೊಳೆತ್ತುವ ಕಾಮಗಾರಿಯನ್ನು ಪ್ರಾರಂಭಿಸಲಾದ ದಿನಾಂಕ ತಾವು ಕೇಳಿದ್ದೀರಿ. ಅದನ್ನು ದಿನಾಂಕ: 2.05.2002ರಂದು ಪ್ರಾರಂಭಿಸಿ, ಪೂರ್ಣಗೊಳಿಸಬೇಕಾಗಿರುವುದು ದಿನಾಂಕ: 20.05.2005ರಂದು ಎಂದರೆ ಕೇವಲ ಹೂಳೆತ್ತುವುದಕ್ಕೆ ಕೆರೆ ಕಾಯಕ ಕೆಲಸದಲ್ಲಿ ಖರ್ಚಾಗಿದೆ ಎನ್ನುವ ವಿವರವನ್ನು ಇಲ್ಲಿ ಕೊಟ್ಟಿದೆ. ಇದರಲ್ಲಿ ಕೇಳತಕ್ಕಂಥ ಉದ್ದೇಶ ಬೇರೆ ಏನು ಇದೆಯೆಂಬುದು ಗೊತ್ತಾಗುತ್ತಿಲ್ಲ. ಇಲ್ಲಿ ಎರಡು, ಮೂರು ಯೋಜನೆಗಳಿದ್ದು ಮೊದಲನೆಯದಾಗಿ ಸ್ಕೌರ್‌ಸಿಟಿಯಲ್ಲಿ "ಕೂಲಿಗಾಗಿ ಕಾಳು" ಎನ್ನುವಂಥಾದ್ದು, ಎರಡನೆಯದಾಗಿ ಬಜೆಟ್ ಪ್ರಾವಿಷನ್‌ನಲ್ಲಿ ಮಾಡುವಂಥಾದ್ದು, ಮೂರನೆಯದಾಗಿ ನಮ್ಮ "ಕೆರೆ ಕಾಯಕ" ಕೆಲಸದಲ್ಲಿ ಕೆಲವು ಡಿಪಾರ್ಟ್‌ಮೆಂಟ್‌ಗಳಿಂದ ಮಾಡಿದ್ದಾರೆ, ಕೆಲವು ಲ್ಯಾಂಡ್ ಆರ್ಮಿಯವರಿಂದ ಮಾಡಿರುವಂತಹ ಕೆಲಸಗಳು ಇವೆ. ಅದುದರಿಂದ ತಾವು ನಿರ್ದಿಷ್ಟವಾಗಿ, ಇಂತಹ ಕೆರೆಯ ಬಗ್ಗೆ ಎಂದು ಹೇಳಿದರೆ, ಅದಕ್ಕೆ ನಾನು ಉತ್ತರಿಸುತ್ತೇನೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಕುಂದವಾಡ ಎಂಬ ಒಂದು ಗ್ರಾಮ ಅದು ದಾವಣಗೆರೆಗೆ ಹೊಂದಿಕೊಂಡಿರುವಂತಹ ಪಳ್ಳಿ ಆ ಪಳ್ಳಿಯಲ್ಲಿ ದೊಡ್ಡ ಕೆರೆ ಇತ್ತು. ಈ ಕೆರೆಗೆ ಭದ್ರಾ ನಾಲೆಯಿಂದ ನೀರು ಬಂದು ಶೇಖರಣೆಯಾಗುತ್ತಿತ್ತು ಇದರಿಂದ ನೂರಾರು ಜನ ರೈತರು ನೀರಾವರಿಯನ್ನು ಮಾಡಿಕೊಂಡು ಇದ್ದರು. ಈಗ ಅಲ್ಲಿ ನೀರಾವರಿ ಮಾಡತಕ್ಕಂಥ ವ್ಯವಸ್ಥೆಯನ್ನು

ರದ್ದುಪಡಿಸಿ, ಆ ರೈತರನ್ನೆಲ್ಲಾ ಒಕ್ಕಲೆಬ್ಬಿಸಿ, ಅದು ಕುಡಿಯುವುದಕ್ಕೆ ಯೋಗ್ಯವಾದಂತಹ ನೀರು ಅಲ್ಲ. ಆ ಕೆರೆಯಲ್ಲಿ ಹೂಳನ್ನು ಎತ್ತಿ ದೊಡ್ಡದಾಗಿ ನಿರ್ಮಾಣ ಮಾಡಿದ್ದಾರೆ, ಅದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚು ಆಗಿದೆಯೋ ಗೊತ್ತಿಲ್ಲ. ಆದುದರಿಂದ ಆ ಕೆರೆಯನ್ನು ಯಾವ ಯೋಜನೆಯಲ್ಲಿ ಕೈಗೊಂಡರು. ಆ ಕಾಮಗಾರಿಯನ್ನು ಯಾರು ಮಾಡಿದರು ಎಂಬುದು ಬೇಕು. ನಾನು ಇಲ್ಲಿ ಎರಡು ಜಿಲ್ಲೆಗಳ ವಿವರಗಳನ್ನು ಕೇಳಿದ್ದೇನೆ. ಅದು ಚಿತ್ರದುರ್ಗ ಮತ್ತು ದಾವಣಗೆರೆಗಳಲ್ಲಿ ಯಾವ್ಯಾವ ಕೆರೆಗಳನ್ನು, ಹೂಳೆತ್ತುವ ಕಾಮಗಾರಿಗಳನ್ನು ಕೈಗೊಂಡಿದ್ದೀರಿ, ಯಾವಾಗ ತೆಗೆದುಕೊಂಡಿದ್ದೀರಿ, ಮತ್ತು ಯಾವಾಗ ಪೂರ್ಣಗೊಳಿಸಿದ್ದೀರಿ, ಎಂಬ ಬಗ್ಗೆ ನಾನು ಪೂರ್ಣವಾಗಿ ವಿವರಗಳನ್ನು ಕೇಳಿದ್ದೆ. ಅದಕ್ಕೆ ತಾವು ಎಲ್ಲಾ ಕೆರೆಗಳ ವಿವರಗಳನ್ನು ಕೊಟ್ಟಿದ್ದೀರಿ, ಮತ್ತು ಯಾವ್ಯಾವುದನ್ನು ಮಾಡಿದ್ದಿರೆಂಬುದನ್ನು ತಿಳಿಸಿದ್ದೀರಿ. ಅದರಲ್ಲಿ ದಾವಣಗೆರೆಯ ಕುಂದವಾಡ ಕೆರೆಯ ವಿವರಗಳನ್ನು ಇದರಲ್ಲಿ ಕೊಟ್ಟಿಲ್ಲ. ಇದರ ಜೊತೆಗೆ ನನಗೆ ಒಂದು ಸಂಶಯ ಕಾಡುತ್ತಿದೆ, ಅದು ಏನೆಂದರೆ ತಾವು "ರೈತ ಕಾಯಕ ಕೆರೆ" ಗಳನ್ನು ಕಳೆದ ವರ್ಷ ಕೆಲವೇ ಊರುಗಳಿಗೆ ಕೊಟ್ಟಿದ್ದೀರಿ. ಈ ವರ್ಷವೂ ಕೂಡ ಅಂತಹ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತಹದ್ದಕ್ಕೆ ನಾನು ವಿನಂತಿ ಮಾಡುತ್ತೇನೆ, ಏಕೆಂದರೆ ಈ ಕೆರೆಗಳನ್ನು ನಂಬಿಕೊಂಡು ರೈತರು ನೂರಾರು ವರ್ಷಗಳಿಂದ ಬದುಕಿಕೊಂಡು ಬಂದಿದ್ದಾರೆ. ಕಳೆದ 10–15 ವರ್ಷಗಳಿಂದ, ಮಳೆ ಕಾಲಕ್ಕೆ ಸರಿಯಾಗಿ ಆಗದೇ, ಕೆರೆಗಳಲ್ಲಿ ಇವತ್ತು ನೀರಿಲ್ಲ, ಆ ಕೆರೆಗಳೂ ಕೂಡ ದುರಸ್ತಿಗೆ ಒಳಪಡಿಸಬೇಕು. ಈ ವರ್ಷ ಅದೃಷ್ಟವಶಾತ್ ಮಳೆ ಚೆನ್ನಾಗಿ ಬರತಕ್ಕಂಥ ಸಂಭವವಿರುವುದರಿಂದ, ತಾವು ಹೆಚ್ಚು ಕೆರೆಗಳನ್ನು "ರೈತ ಕಾಯಕ ಯೋಜನೆ" ಯಡಿಯಲ್ಲಿ, ದುರಸ್ತಿ ಮಾಡುವಂತಹ ಕೆಲಸವನ್ನು ಕೈಗೊಳ್ಳಬೇಕೆಂದು, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈ "ರೈತ ಕಾಯಕ ಕೆರೆ" ಈ ಯೋಜನೆಯಲ್ಲಿ ರೈತರೇ ಮುಂದೆ ಬರಬೇಕು, ಇದಕ್ಕೆ ಸರ್ಕಾರವೂ ಸಹಾಯ ಮಾಡಿ, ಆ ಕೆರೆಗಳಲ್ಲಿ ಹೂಳು ಎತ್ತಿಸುವಂತಹ ಕೆಲಸವನ್ನು ಮಾಡಿಸಬೇಕೆಂಬ ಗುರಿಯನ್ನು ಇಟ್ಟುಕೊಂಡು, ಆ ಕೆಲಸಗಳನ್ನು ಪ್ರಾರಂಭ ಮಾಡಿದೆವು. ಆದರೆ ದುರ್ದೈವದಿಂದ ಏನಾಗಿದೆಯೆಂದರೆ, ಕೆಲವು ಕಡೆಗಳಲ್ಲಿ ರೈತರು ಮುಂದೆ ಬರುವುದಿಲ್ಲ. ಪ್ರಾರಂಭದಲ್ಲಿ ಏನಾಯಿತೆಂದರೆ, ಕೋಲಾರದಲ್ಲಿ ರೈತರು ನಾವೆಲ್ಲವನ್ನು ಮಾಡುತ್ತೇವೆಂದು ಹೇಳಿದರು. ಅಲ್ಲಿ ಎಲ್ಲಾ ಕಡೆಗಳಲ್ಲೂ ಆ ಸ್ಕೀಮ್ ಅನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಆಗ ನಾವು ತಾಲ್ಲೂಕಿಗೆ ಒಂದಾದರೂ ಮಾಡೋಣವೆಂದು, ಹೂಳೆತ್ತುವಂತಹ ಕಾರ್ಯಕ್ರಮವನ್ನು ಮಾಡಿದೆವು. ಕೆಲವು ತಾಲ್ಲೂಕುಗಳಲ್ಲಿ ಆಸಕ್ತಿ ವಹಿಸಿ ಒಂದೆರಡು ಕಡೆಗಳಲ್ಲಿ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ, ತಮಗೆ ಗೊತ್ತಿರುವ ಹಾಗೆ ಕನಿಷ್ಠ ಪಕ್ಷ ಮಣ್ಣನ್ನು ಒಂದು ಕಡೆ ಎತ್ತಿ ಹಾಕಿದರೆ, ಜನರು ಅದನ್ನು ತೆಗೆದುಕೊಂಡು ಹೋಗಿ ಇನ್ನೊಂದು ಕಡೆಗೆ ಹಾಕುತ್ತಾರೆ. ಅದರಲ್ಲಿ ಎಲಿಮೆಂಟ್ ಆಫ್ ಹತ್ತು ಪರ್ಸೆಂಟ್, ಇಪ್ಪತ್ತು ಪರ್ಸೆಂಟ್ ಮೆಷನರಿಯನ್ನು ಯೂಸ್ ಮಾಡುವಂಥಾದ್ದು ಇರುತ್ತದೆ. ಆಗ ನ್ಯಾಚುರಲಿ ಜನರು ಕೂಲಿಗಾಗಿ ಕಾಳು, ಇದನ್ನು ಮಿಷನರಿಗೆ ಉಪಯೋಗ ಮಾಡುತ್ತಿದ್ದಾರೆಂಬ ಆಪಾದನೆ ಬರುತ್ತದೆಂದು, ಬಹಳಷ್ಟು ಜನರು, ಇವತ್ತಿಗೂ ಕೂಡ ಯಾರು ಕಾಳನ್ನು ತೆಗೆದುಕೊಳ್ಳುವುದಕ್ಕೂ ತಯಾರಿಲ್ಲ, ಕೆಲಸ ಮಾಡುವುದಕ್ಕೂ ತಯಾರಿಲ್ಲ, ನಾವು ಕೆಲಸವನ್ನು ಮಾಡಿ, ಏಕೆ ಬೈಸಿಕೊಳ್ಳಬೇಕು, ಜೈಲಿಗೆ

ಹೋಗಬೇಕೆಂದು, ಇದು ಒಂದು ಕಡೆಯದಾದರೆ, ಎರಡನೆಯದಾಗಿ, ನಾವು ವಾಸ್ತವಾಂಶವನ್ನು ನೋಡಬೇಕಾಗುತ್ತದೆ, ಆಂಧ್ರಪ್ರದೇಶದಲ್ಲಿ, ಬೇರೆ ರಾಜ್ಯಗಳಲ್ಲಿ ಇದು ಹೆಚ್ಚಿನ ರೀತಿಯಲ್ಲಿ ಇದರ ಉಪಯೋಗವಾಗಿದೆ. ಇವರು ಇದರ ಉಪಯೋಗ ಮಾಡಿಕೊಂಡು ಕೆರೆಗಳನ್ನು ಮಾಡಿಕೊಂಡಿದ್ದಾರೆ, ಅನೇಕ ಕಡೆಗಳಲ್ಲಿ ರಸ್ತೆಗಳನ್ನು ಮಾಡಿಕೊಂಡಿದ್ದಾರೆ. ಕಟ್ಟಡಗಳನ್ನು ಕಟ್ಟಿಸಿಕೊಂಡಿದ್ದಾರೆ. ಆದರೆ ನಮ್ಮಲ್ಲಿ ಏನಾಗಿದೆಯೆಂದರೆ, ಹೆಚ್ಚು ಕಡಿಮೆ, ನಮ್ಮ ವಿಜಿಲೆನೆಟ್ ಇದ್ದು, ನಮ್ಮ ಜನ ಚೆಕ್ ಮಾಡಿರುವುದರಿಂದ, ಅನೇಕ ಕಡೆಗಳಲ್ಲಿ ಜನರು ಮುಂದೆ ಬರುತ್ತಿಲ್ಲ, ಇನ್ನೊಂದು ಕಡೆ ಇಂಜಿನಿಯರ್ಸ್‌ಗಳೂ ಸಹಿತ ಆಸಕ್ತಿ ವಹಿಸಿ ಕೆಲಸವನ್ನು ಮಾಡುತ್ತಿಲ್ಲ. ಅದಕ್ಕೆ ನಾವೆಲ್ಲರೂ ಸೇರಿ ಇದಕ್ಕೆ ಅಂದರೆ ಅದು ರೈತ ಕಾಯಕ ಕೆರೆ ಇರಬಹುದು, ಅಥವಾ ಹೊಸ ಕೆರೆಗಳ ನಿರ್ಮಾಣವನ್ನು ಮಾಡುವುದಕ್ಕೂ ಕೂಡ, ಇದರ ಬಗ್ಗೆ ಚಿಂತನೆ ಮಾಡುವಂತಹ ಅವಶ್ಯಕತೆ ಇದೆ. ಕನಿಷ್ಟಪಕ್ಷ ಒಂದೊಂದು ತಾಲ್ಲೂಕಿನಲ್ಲಿ, 5–6 ಕೆರೆಗಳನ್ನಾದರೂ ದುರಸ್ತಿ ಮಾಡಿದರೆ, ಒಳ್ಳೆಯದಾಗುತ್ತದೆ. ಹಿಂದೆ ನಾವು ನ್ಯಾಚುರಲ್ ಕಲಾಮಿಟಿಯಲ್ಲಿ ಸ್ವಲ್ಪಹಣವನ್ನು ಕೊಟ್ಟು, ಫುಡ್‌ಗ್ರೈನ್ ಕೊಟ್ಟು, ಈ ಕೆರೆಗಳನ್ನು ಏನು ದುರಸ್ತಿ ಮಾಡಿದ್ದೇವೆ. ಅದೇ ರೀತಿಯಾಗಿ ಮಿಸ್ ಯೂಸ್ ಆಗಬಾರದು, ಮತ್ತು ಸೇಮ್ ಟೈಮ್ ಇವೆರಡನ್ನು ನೋಡಿಕೊಳ್ಳಬೇಕಾಗುತ್ತದೆ. ಒಂದು ಕಡೆ ಇದು ಸದುಪಯೋಗವಾಗಬೇಕು, ಇನ್ನೊಂದು ಕಡೆ ದುರುಪಯೋಗವಾಗುವಂಥಾದ್ದನ್ನು ನಿಲ್ಲಿಸಬೇಕು. ಈ ಒಂದು ಉದ್ದೇಶದಿಂದ ನಾವು ಪ್ರಯತ್ನ ಮಾಡಿದರೆ, ಇದರಿಂದ ಏನಾದರೂ ಪ್ರಯೋಜವಾಗಬಹುದು. ಇಲ್ಲಿ ನಾವು ಹೂಳೆತ್ತುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಅಷ್ಟನ್ನು ಮಾತ್ರ ಕೊಟ್ಟಿದ್ದೇವೆ. ರೈತ ಕಾಯಕ ಕೆರೆ ಯೋಜನೆಗೆ 16 ಲಕ್ಷ ರೂಪಾಯಿಗಳಿಗೆ ಇತ್ತು, ಅಷ್ಟೆ. ಇನ್ನು ಬಾಕಿ ಹಣ ವಿವಿಧ ಬಾಬ್ತುಗಳಿಂದ ಖರ್ಚು ಆಗಿರಬಹುದು. ಆದರೆ ಈ ಬಾಬ್ತಿನಲ್ಲಿ ಖರ್ಚಾದ ಹಣವನ್ನು ಇದರಲ್ಲಿ ತೋರಿಸಿದ್ದೇವೆ. ತಾವು ಕೇಳಿದಂತಹ ದಾವಣಗೆರೆಯ ಎರಡು ಚಿತ್ರದುರ್ಗದಲ್ಲಿ ಅನೇಕ ಕೆರೆಗಳು ಇವೆ. ಇವೆಲ್ಲವನ್ನೂ ಕೂಡ, ನಾವು ಪಟ್ಟಿ ಮಾಡಿ ತಮಗೆ ಕೊಟ್ಟಿದ್ದೇವೆ, ಅದು ತಮ್ಮ ಬಳಿ ಇದೆ. ಇದು ಯಾವ ದಿನಾಂಕದಲ್ಲಿ ಪ್ರಾರಂಭವಾಯಿತು, ಯಾವ ದಿನಾಂಕಕ್ಕೆ ಕೊಟ್ಟಂತಹ ಮೊತ್ತದಲ್ಲಿ ಖರ್ಚಾಗಿರುವುದನ್ನು ತೋರಿಸಿದ್ದೇವೆ.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಈ ಕೆರೆಗಳಲ್ಲಿ ಹೂಳು ಎತ್ತುವಂತಹ ಕೆಲಸದ ಕಾರ್ಯಕ್ರಮವನ್ನು ಹಿಂದಿನ ಸರ್ಕಾರ ತೆಗೆದುಕೊಂಡಿತ್ತು. ಇಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ಈ ಕೆರೆಗಳಲ್ಲಿ ಹೂಳು ಎತ್ತುವಂತಹ, ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಆದರೆ ಇವತ್ತು ಆ ಕಾರ್ಯಕ್ರಮವನ್ನು ಪೂರ್ತಿಯಾಗಿ ಜಾರಿಯಾಗಲಿಲ್ಲ. ಇದರ ಜೊತೆಗೆ ರೈತ ಕಾಯಕದ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿದ್ದೀರಿ, ಇದು ಸ್ವಲ್ಪ ಅಪ್ರಯೋಜಕವೆಂದು ನನಗೆ ಅನ್ನಿಸುತ್ತಿದೆ. ಇಲ್ಲಿ ನೀವೇ ಹೇಳಿದ ಹಾಗೆ ರೈತ ಸ್ವತಃ ಬಂದು, ಅದನ್ನು ತೆಗೆದುಕೊಂಡು ಹೋಗುವ ಸ್ಥಿತಿಯಲ್ಲಿ ಇಲ್ಲ. ಇದಕ್ಕೆ ಬರಗಾಲ ಮತ್ತೆ ಬೇರೆ ಬೇರೆ ಕಾರಣಗಳು ಇರಬಹುದು. ಹಳ್ಳಿಗಳಲ್ಲಿ ಎತ್ತು, ಬಂಡಿಗಳು ಇಲ್ಲ, ಹಾಗಾಗಿ ನೀವು ವಿಶ್ವ ಬ್ಯಾಂಕ್‌ನ ನೆರವಿನಿಂದ ಕೆರೆಗಳಲ್ಲಿ ಹೂಳು ಎತ್ತುವ ಒಂದು ಬೈಗಾಂಟಿಕ್ ಕಾರ್ಯಕ್ರಮವನ್ನು ಹಾಕುತ್ತೇವೆಂದು ಹೇಳಿದ್ದಿರಿ. ಅದು ಈಗ ಯಾವ ಸ್ಥಿತಿಗೆ ಬಂದಿದೆ, ಅದನ್ನು ಮುಂದುವರೆಸುತ್ತೀರಾ, ಏಕೆಂದರೆ ನಮ್ಮಂಥ ಜಿಲ್ಲೆಗಳಲ್ಲಿ ಅದರ ಅವಶ್ಯಕತೆ ಬಹಳ ಇದೆ. ಈ ಹೂಳು ತೆಗೆಯುವಂಥಾದ್ದು.

ಆದುದರಿಂದ ಇದಕ್ಕೆ ಬೇರೆಯೊಂದು ಮೆಕಾನಿಸಂ ಅನ್ನು ಹುಡುಕಿ, ಆ ಕೆರೆಗಳಲ್ಲಿ ಹೂಳು ತೆಗೆಯತಕ್ಕಂಥ ಯೋಜನೆಯನ್ನು, ಮುಂದುವರೆಸಬೇಕು, ಮತ್ತೆ ಭಾರೀ ಫಾಸ್ಟ್ ಆಗಿ ಆಗಬೇಕು. ಎಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಶ್ರೀರಾಮರೆಡ್ಡಿಯವರು ಹೇಳಿದಂತಹ ವಿಚಾರ ಬೇರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ವಿಚಾರ ಬೇರೆಯಾಗಿದೆ. "ರೈತ ಕಾಯಕ ಕೆರೆ" ಯಲ್ಲಿ ವಾಲೆಂಟರಿಯಾಗಿ ರೈತರು ಬಂದು, ಸರ್ಕಾರವೂ ಸಹಾಯ ಮಾಡಿ, ಹೂಳು ಎತ್ತಿ ದುರಸ್ತಿ ಮಾಡುವಂಥದ್ದು. ತಮ್ಮ ಜಿಲ್ಲೆಯಲ್ಲಿ ಏನಾಗಿದೆಯೆಂದರೆ, ವಿಶ್ವ ಬ್ಯಾಂಕ್‌ನ ನೆರವಿನಿಂದ, "ಜಲ ಸಂವರ್ಧನ್" ಯೋಜನೆಯೆಂದು ಆ ಯೋಜನೆಯಡಿಯಲ್ಲಿ ಸುಮಾರು ಹೆಚ್ಚು ಕಡಿಮೆ ಒಂದು ಸಾವಿರ ಕೆರೆಗಳ ದುರಸ್ತಿಯನ್ನು ಮಾಡಬೇಕೆಂದು, ವಿಶ್ವ ಬ್ಯಾಂಕ್‌ನವರು ಅದಕ್ಕೆ ಒಪ್ಪಿಕೊಂಡು, ಅದಕ್ಕೆ ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಎರಡು ಸಾವಿರ ಕೆರೆಗಳ ಪೈಕಿ, ಸಾವಿರ ತಮಗೆ ಕೊಟ್ಟಿದೆ. ಬೇರೆ ಕಡೆಗಳಲ್ಲಿ ಹತ್ತು, ಇಪ್ಪತ್ತು ಕೆರೆಗಳುಈ ರೀತಿ ಇವೆ. ಆ ಹಣ 650 ಕೋಟಿ ರೂಪಾಯಿಗಳು ಕೆಲಸಕ್ಕೆ, ಮತ್ತು 2005 ಕೆರೆಗಳು, ಕೋಲಾರದಲ್ಲಿ ಕೂಡ ಹೆಚ್ಚು ಕಡಿಮೆ ಶೇಕಡ 50ರಷ್ಟು ಎಂದು ಹೇಳಿದೆ. ಆದರೆ ಉಳಿದ ಕಡೆಗಳಲ್ಲಿ ಈ ಸ್ಕೀಮ್ ಇಲ್ಲ. ನಮ್ಮಲ್ಲಿ ಸ್ಪೆಷಲ್ ಒಂದು ಯೋಜನೆ ಬಂದಿದೆ, ಆದರೆ ದುರ್ದೈವದಿಂದ ಅಲ್ಲ "ಬಳಕೆದಾರರ ಸಂಘ" ಎಂದು ಮಾಡಿದ್ದೇವೆ. ಅವರೂ ಕೂಡ ಮುಂದೆ ಬರುತ್ತಿಲ್ಲ, ಒಬ್ಬರೂ ಕೂಡ ಮಾಡುತ್ತಿಲ್ಲ. ಅದಕ್ಕೆ ವರ್ಲ್ಡ್ ಬ್ಯಾಂಕ್‌ನವರು ಒಂದು ಕಂಡೀಷನ್ ಹಾಕಿದರು. ಗೌವರ್ನಮೆಂಟ್‌ನವರು ಇಂಟರ್‌ಫಿಯರ್ ಮಾಡಬಾರದೆಂದು ಇಲ್ಲ ಎನ್.ಜಿ.ಒ.ಗಳೇ ಕೆಲಸವನ್ನು ಮಾಡಬೇಕು, ಅವರೇ ಮಾಡಿ ಅದರ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಹೇಳಿದರು. ಇವತ್ತು ಹೆಚ್ಚು ಕಡಿಮೆ 350 ಕೋಟಿ ರೂಪಾಯಿಗಳು ರಿಸರ್ಚ್, ಗಿಡಗಳನ್ನು ಹಾಕುವುದು, ಇಂಥ ಕೆಲಸಗಳಿಗೆ ಆಗುತ್ತದೆ, ಅದಕ್ಕೆ ನಾನು ನಮ್ಮವರಿಗೆ ನಾನು ಹೇಳಿದೆ. ಅವರು ಕಡಿಮೆ ಬಡ್ಡಿಯಲ್ಲಿ ಸಾಲವನ್ನು ಕೊಟ್ಟರೂ ಕೂಡ, ಬರೀ ವೇಸ್ಟಲ್ ಎಕ್ಸ್‌ಪೆಂಡಿಚರ್ ಜಾಸ್ತಿ ಇದೆ. ಅದಕ್ಕೆ ದಯವಿಟ್ಟು ಇದನ್ನು ಕಡಿಮೆ ಮಾಡಿ, ನಾವು ಬೇಕಾದರೆ ಸಾಲವನ್ನು ತೆಗೆದುಕೊಳ್ಳೋಣ, ಎಂದರೆ ಫುಕಸಟ್ಟೆ ಸಾಲ ಕೊಡುತ್ತಾರೆಂದು ನಮಗೆ ಅನಿಸಿದೂ ಕೂಡ, ಈ ಓವರಾಲ್ ಎಕ್ಸ್‌ಪೆಂಡಿಚರ್ ಅನ್ನು ನೋಡಿದರೆ, ನಾವು ಬ್ಯಾಂಕ್‌ನಿಂದ ಸಾಲವನ್ನು ತುರುವುದೇ ಚೆನ್ನಾಗಿರುತ್ತದೆ. ಅದಕ್ಕೆ ವಿಶ್ವ ಬ್ಯಾಂಕ್‌ನವರ ಕಂಡೀಷನ್ಸ್ ಬೇಡ, ಆದಷ್ಟು ಕಡಿಮೆ ಕಂಡೀಷನ್ಸ್ ಹಾಕಿಕೊಟ್ಟರೆ, ನಾವು ಆ ಕೆಲಸವನ್ನು ಮಾಡಿಸೋಣ, ಇಲ್ಲಿ ಹಿಂದೇಟು ಬಿದಿದ್ದು ಏಕೆಂದರೆ, "ಯೂಸರ್ಸ್ ಸೊಸೈಟಿ" ಎಂದು ಏನು ಆಗಿದೆ, ಅವರು ಇದರ ಉಪಯೋಗವನ್ನು ಮಾಡಿಕೊಳ್ಳುತ್ತಿಲ್ಲ. ಅಲ್ಲಿ ಯಾರ್ಯಾರೋ ಚೇರ್ಮನ್‌ಗಳು ಆಗುತ್ತಾರೆ, ಅವರು ಲಾಭವಿದ್ದಷ್ಟು ಕೆಲಸವನ್ನು ಮಾಡುತ್ತಾರೆ. ಬಾಕಿ ಇದ್ದುದ್ದನ್ನು ಮಾಡುವುದಿಲ್ಲ. ವರ್ಲ್ಡ್ ಬ್ಯಾಂಕ್ ನಾರ್ಮ್ಸ್ ಪ್ರಕಾರ ನಾವು ಇಂಟರ್‌ಫಿಯರ್ ಮಾಡುವುದಕ್ಕೂ ಜಾಸ್ತಿ ಬರುತ್ತಿಲ್ಲ. ನಾವು ನಮ್ಮ ಇಂಜಿನಿಯರ್ಸ್ ಕಳುಹಿಸಿದರೆ, ಅಲ್ಲಿ ಅವರ ಬೇರೆ ಇಂಜಿನಿಯರ್ಸ್ ಇರುತ್ತಾರೆ. ಹೀಗಾಗಿ ಸ್ವಲ್ಪ ತೊಂದರೆಯಾಗಿದೆ. ಜಲಸಂವರ್ಧನ ಯೋಜನೆಗೆ ಮುಖ್ಯ ಮಂತ್ರಿಗಳು ಚೇರ್‌ಮೆನ್ ಆಗಿದ್ದಾರೆ. ಈ ಮೂರು ವರ್ಷಗಳಲ್ಲಿ 2005 ಕೆರೆಗಳನ್ನು ಕಂಪ್ಲೀಟ್ ಮಾಡಬೇಕು ಎಂದು ಇದೆ. ತಾವು ಮೊನ್ನೆ ಬಜೆಟ್ ಭಾಷಣದಲ್ಲಿ ನೋಡಿರಬಹುದು, ನಾವು ಇನ್ನೂ 15 ಪರ್ಸೆಂಟ್ ಹಣವನ್ನೂ ಉಪಯೋಗ ಮಾಡಿಲ್ಲ. ಅದಕ್ಕಾಗಿ ನಾವು ಇರುವ ಅಡಕು-ತೊಡಕುಗಳನ್ನು ಸರಿಪಡಿಸಿ, ಎಂ.ಎಲ್.ಎ.ಗಳನ್ನಾಗಲೀ

ಅಥವಾ ನಾನ್-ಅಫಿಷಿಯಲ್ಸ್‌ಗಳನ್ನಾಗಲೀ ಅಥವಾ ಗವರ್ನಮೆಂಟ್ ಅಫಿಷಿಯಲ್ಸ್ ಅನ್ನು ಇದರಲ್ಲಿ ಸೇರಿಸಿ ಏನಾದರೂ ಮಾಡಿ ತ್ವರಿತಗತಿಯಿಂದ ಮಾಡಬೇಕು ಎನ್ನುವುದು ನನ್ನ ಯೋಚನೆ ಕೂಡ ಆಗಿದೆ. ಆ ಒಂದು ದಿಕ್ಕಿನಲ್ಲಿ ನಾನು ಕೂಡ ಚಿಂತನೆ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎನ್.ಜಿ.ಓ.ಗಳ ಕೈಯಿಂದ ಅದನ್ನು ತಪ್ಪಿಸಿ, ಸರ್ಕಾರವೇ ಬೇರೆ ಮೆಕಾನಿಸಂ ಹುಡುಕಿ, ಅದನ್ನು ಸ್ಟ್ರೀಂಲೈನ್ ಮಾಡಿದರೆ ಅದು ಬೇಗ ಉಪಯೋಗವಾಗುತ್ತದೆ. ನೀವು ಹೇಳಿದುದು ಸಂಪೂರ್ಣ ಸತ್ಯವಾಗಿದೆ. ನೀವು ಹೇಳಿದಂತೆ, ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಕಮಿಟಿಗಳೂ ಮಾಡುವುದಿಲ್ಲ. ಎನ್.ಜಿ.ಓ.ಗಳೂ ಮಾಡುವುದಿಲ್ಲ. ಅವರು ಪುನಃ ರೀಸರ್ಚ್, ಅದು ಇದು ಎಂದು ಹೇಳಿ ಟೈಂ ವೇಸ್ಟ್ ಮಾಡುತ್ತಿದ್ದಾರೆ. ನೀವು ಹೇಳಿದುದು ಸತ್ಯವಾಗಿದೆ. ಅದಕ್ಕಾಗಿ, ಬೇರೆ ಏನಾದರೊಂದು ಮಾರ್ಗ ಹುಡುಕಿ ಸ್ಟ್ರೀಂಲೈನ್ ಮಾಡಿದರೆ ಬಹಳ ಉಪಯೋಗವಾಗುತ್ತದೆ. ಅವರು ಹೇಗೂ ಸಾಲವನ್ನು ಕೊಡುತ್ತಿದ್ದಾರೆ. ಆ ಸಾಲವನ್ನು ನಾವು ತೀರಿಸಲೇಬೇಕು. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ, ನೀವು ಹೇಳಿದ ರೀತಿಯಲ್ಲಿ ಅದು ಸರಿಯಾಗುತ್ತದೆ.

ಶ್ರೀ ಹೆಚ್. ಆಂಜನೇಯ : 'ಕೂಲಿಗಾಗಿ ಕಾಳು' ಯೋಜನೆಯಡಿಯಲ್ಲಿ ಅನೇಕ ಕೆರೆಗಳ ಹೂಳೆತ್ತುವ ಕಾರ್ಯವನ್ನು ಮಾಡಿದ್ದಾರೆ. ಈಗ ಆ ಕಾರ್ಯವನ್ನು ಮಾಡಲು ಅಧಿಕಾರಿಗಳು ಹೆದರುತ್ತಿದ್ದಾರೆ. ಅಕ್ಕಿಯನ್ನು ಹೇಗೆ ಬಳಕೆ ಮಾಡಬೇಕು, ಹಣವನ್ನು ಯಾವ ರೀತಿ ಬಳಕೆ ಮಾಡಬೇಕು ಎಂದು ಹೆದರುತ್ತಿದ್ದಾರೆ. ಈಗ ನಮಗೆ ಸ್ಕೇರ್‌ಸಿಟಿಯಲ್ಲಿ ಹಣ ಬಂದಿದೆ. ಅದರಲ್ಲಿ ಕೆರೆಗಳ ಹೂಳು ಎತ್ತಿ ಎಂದರೆ, ನಾವ್ಯಾರೂ ಎತ್ತುವುದಿಲ್ಲ, ಜನರ್ಯಾರೂ ಬರುವುದಿಲ್ಲ, ಕರೆದರೆ ಸಾವಿರಾರು ಜನರು ಬಂದುಬಿಡುತ್ತಾರೆ. ಒಬ್ಬರಿಗೆ 5 ಕೆ.ಜಿ. ಅಕ್ಕಿ ಕೊಡಬೇಕು, 15 ರೂಪಾಯಿ ಕೂಲಿ ಕೊಡಬೇಕು. ಅಕ್ಕಿ ಬೇಡ ಎಂದು ಹೇಳುತ್ತಾರೆ. ಆದರೆ ಕೂಲಿ ಕೊಡಲು ನಮ್ಮಲ್ಲಿ ಹಣ ಇಲ್ಲ. ಆ ಕಾಮಗಾರಿಯನ್ನೇ ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಇಂಜಿನಿಯರುಗಳು ಹೆದರುತ್ತಿದ್ದಾರೆ. ತಾವು ಹೇಳಿದಿರಿ, ಅದರ ಸಾಧಕ-ಬಾಧಕಗಳನ್ನು ವಿಚಾರ ಮಾಡಿ, ಎಲ್ಲರೂ ಸೇರಿ ಒಂದು ಒಮ್ಮತ ಅಭಿಪ್ರಾಯಕ್ಕೆ ಬಂದು ಕೂಲಿಗಾರಿ ಕಾಳು' ಯೋಜನೆಯಡಿಯಲ್ಲಿ.....

ಶ್ರೀ ಎಂ.ಪಿ. ವೆಂಕಟೇಶ್ : ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರಿಗೆ ಹೇಳಿ ಸ್ವಾಮಿ ಅದನ್ನು ನೀವು ಈಗ ಅವರೇ ತಕರಾರು ಮಾಡುತ್ತಿರುವುದು. ಈ ಯೋಜನೆಯ ದುರುಪಯೋಗವಾಗಲು, ಕೆಲಸ ಸ್ಥಗಿತಗೊಳ್ಳಲು ಅವರೇ ಕಾರಣ. ಇದನ್ನು ಸಿ ಓ ಡಿ ಎನ್‌ಕ್ವೈರಿಗೆ ಕೊಡಿ, ಅದು, ಇದು ಎಂದು ಹೇಳಿ ಸದನದ ಸಮಿತಿ ಮಾಡಿ ಎಂದು ಈ ಯೋಜನೆಗೆ ತಕರಾರು ಮಾಡುತ್ತಿರುವವರು ಅವರೇ, ನೀವು ಅವರಿಗೆ ಹೇಳಿ.

ಶ್ರೀ ಹೆಚ್. ಆಂಜನೇಯ : ತಾವು ಹೇಳಿದಂತೆ, ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಏನಿದೆ, ನಮ್ಮ ರಾಜ್ಯ ಸರ್ಕಾರದ ಮಾರ್ಗಸೂಚಿ ಯಾವುದಿದೆ ಎನ್ನುವ ಬಗ್ಗೆ .....

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ಸದನ ಸಮಿತಿ ಮಾಡಿ ಎಂದು ಗಲಾಟೆ ಮಾಡಿ, ಸಿ ಓ ಡಿ ಎನ್‌ಕ್ವೈರಿ ಬೇಡ, ಸಮಿತಿ ಮಾಡಿ ಎಂದು ಗಲಾಟೆ ಮಾಡಿ ಇವತ್ತು ಈ ಯೋಜನೆಯ ಅಕ್ಕಿ ಕೊಳೆತು ಹಾಳಾಗುತ್ತಿದೆ. ಅದಕ್ಕೆ ನೀವು ಜವಾಬ್ದಾರರು.

(ಗೊಂದಲ)

(ಆಡಳಿತ ಮತ್ತು ವಿರೋಧ ಪಕ್ಷಗಳ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಆಂಜನೇಯ ಅವರೇ ಬೇಗ ಹೇಳಿ ಮುಗಿಸಿ. ಒಂದು ಪ್ರಶ್ನೆಗೆ 15–20 ನಿಮಿಷ ತೆಗೆದುಕೊಂಡರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, I am on a Point of Order.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಪ್ರಶ್ನೆ ಕೇಳುವವರು ಇವರು. ಇವರು ಪ್ರಶ್ನೆ ಕೇಳಿದರೆ ಅವರು ಉತ್ತರ ಕೊಡುತ್ತಾರೆ. ಇದರ ಮಧ್ಯೆ ಆ ಕಡೆ ಎಂಟು ಜನ ಎದ್ದುನಿಂತು ಮಾತನಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಇಲ್ಲಿ ಯಾವ ಪಾಯಿಂಟ್ ಆಫ್ ಆರ್ಡರೂ ಇಲ್ಲ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ : ನಿಮ್ಮಿಂದ ಇವತ್ತು ಅಕ್ಕಿಯೆಲ್ಲಾ ಕೊಳೆತು ನಾಶವಾಗಿ ಹೋಗುತ್ತಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಈ ರೀತಿ ಅಡ್ಡ ಮಾತನಾಡುವುದು ಸರಿಯಲ್ಲ. ದಯಮಾಡಿ ಕುಳಿತುಕೊಳ್ಳಿ. ಈ ರೀತಿಯಾದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, I am on a Point of Order.

ಅಧ್ಯಕ್ಷರು : ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನೀವು ಪ್ರಶ್ನೆ ಕೇಳುತ್ತಿದ್ದೀರೋ, ಅಡ್ಡ ಮಾತನಾಡುತ್ತಿದ್ದೀರೋ? ಈ ರೀತಿಯಾದರೆ ಪ್ರಶ್ನೆಗಳು ಮುಗಿಯುತ್ತವೆಯೇನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಲ್ಲಾ ಸ್ವಾಮೀ, ಒಬ್ಬ ಸದಸ್ಯರು ಪ್ರಶ್ನೆ ಕೇಳಿದರೆ, ಪ್ರಶ್ನೆ ಕೇಳಿರುವ ಸದಸ್ಯನಿಗೆ ತಾವು ರಕ್ಷಣೆ ಕೊಡಬೇಕೇ ಹೊರತು, ಅದನ್ನು ಬಿಟ್ಟು ಇವರು ಯಾವ್ಯಾವುದೋ ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. I am on my legs. ಹಿರಿಯ ಸದಸ್ಯರು ಹೀಗೆ ಮಾಡಿದರೆ ಹೇಗೆ? ದಯಮಾಡಿ ಮೊದಲು ಕುಳಿತುಕೊಳ್ಳಿ ನೀವು. ವಾಟಾಳ್‌ರವರೇ, ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಅಡ್ಡ ಮಾತನಾಡತಕ್ಕಂಥಾದ್ದು. ಪ್ರಶ್ನೆ ಕೇಳತಕ್ಕಂಥಾವರಿಗೆ ಅಡ್ಡಿ ಮಾಡತಕ್ಕಂಥಾದ್ದು ಸರಿಯಾದ ಸಂಪ್ರದಾಯವಲ್ಲ. ನಿಮ್ಮ ರಾಜಕೀಯ ತೀಟೆಗಳಿದ್ದರೆ ಹೊರಗಡೆ ತೀರಿಸಿಕೊಳ್ಳಿ. ಪ್ರಶ್ನೆಗಳನ್ನು ಕೇಳಲು ಅವಕಾಶ ಮಾಡಿಕೊಡಿರಿ. ಏನಿದು? ನೀವು ಸದನ ನಡೆಸಬೇಕೆಂದಿದ್ದೀರೋ ಅಥವಾ ಏನಾದರೂ ಆಟವಾಡಬೇಕೆಂದಿದ್ದೀರೋ? ತಾವು ದಯಮಾಡಿ ಕೇಳಿ. ಒಂದೇ ನಿಮಿಷದಲ್ಲಿ ಕೇಳಬೇಕು.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರಿಗೆ ಕೃತಜ್ಞತೆಗಳು. ಸದಸ್ಯರಿಗೆ ಒಳ್ಳೆಯ ಸಲಹೆಯನ್ನು ಕೊಟ್ಟಿರಿ, ಒಳ್ಳೆಯ ಎಚ್ಚರಿಕೆಯನ್ನು ಕೊಟ್ಟಿರಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಸವರಾಜ ರಾಯರೆಡ್ಡಿಯವರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೇ, ತಾವು ಉನ್ನತ ಹುದ್ದೆಯಲ್ಲಿದ್ದೀರಿ. 'ರಾಜಕೀಯ ತೀಟೆ' ಎನ್ನುವಂಥ ಶಬ್ದಗಳನ್ನು ತಾವು ದಯಮಾಡಿ ಬಳಸಬಾರದು ಎಂದು ನಾನು ಕಳಕಳಿಯ ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು : ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಪ್ರಶ್ನೆ ಕೇಳುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳುತ್ತಿರತಕ್ಕಂಥಾದ್ದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಸದಸ್ಯರಿಗೆ ಹೇಳತಕ್ಕಂಥಾದ್ದು ಒಂದೇ ಒಂದು ಪ್ರಶ್ನೆ. ಏನೆಂದರೆ.....

(ಗೊಂದಲ)

ಶ್ರೀ ಆರ್. ಅಶೋಕ್ : ಅಧ್ಯಕ್ಷರಿಗೇ ಬುದ್ಧಿವಾದ ಹೇಳುತ್ತಿದ್ದಾರೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ಸಭೆ ನಡೆಸತಕ್ಕಂಥ ಜವಾಬ್ದಾರಿ ನನಗಿದೆ. ಆದ್ದರಿಂದ ನಿಗದಿತ ಅವಧಿಯಲ್ಲಿ, ಸಂಪ್ರದಾಯದ ಪ್ರಕಾರ ಈ ಸಭೆ ನಡೆಯಬೇಕು. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಅಧ್ಯಕ್ಷರ ಮೇಲೆ ಮಾಡಿರತಕ್ಕಂಥ ದೊಡ್ಡ ಆರೋಪಣೆ. ಇದು ಸರಿಯಲ್ಲ. ಅವರು ಅದನ್ನು ಹಿಂತೆಗೆದುಕೊಳ್ಳಬೇಕು. ಮೊದಲು ಇದು ತೀರ್ಮಾನವಾಗಬೇಕು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇದನ್ನು ಲಂಬಿಸತಕ್ಕಂಥ ಅಗತ್ಯವಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ : ಸಭಾಧ್ಯಕ್ಷರ ಮೇಲೇ ಅವರು ಅಲಿಗೇಷನ್ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಹೀಗೆ ಮಾಡಿದರೆ ಹೇಗೆ? ಇಂಥ ಪ್ರಸಂಗಗಳು ಬರುತ್ತವೆ. ಇದೆಲ್ಲಾ ಇದ್ದದ್ದೇ. ಆದರೆ, ಸದನ ನಡೆಯಲು ತಾವೆಲ್ಲಾ ಸಹಕರಿಸಬೇಕು. ದಯಮಾಡಿ ಕುಳಿತುಕೊಳ್ಳಬೇಕು.

ವಾಟಾಳ್ ನಾಗರಾಜ್ : ತಮ್ಮ ಮಾತನ್ನು ನಾವು .....

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅದನ್ನು ನಾನು ನೋಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಅವರು ನಾನು ಬಳಸಿದ ಶಬ್ದದ ಬಗ್ಗೆ ಎತ್ತಿದ್ದಾರೆ. ಅದನ್ನು ನಾನು ನೋಡುತ್ತೇನೆ. ದಯಮಾಡಿ ನೀವು ಶಾಂತರಾಗಿ ಕುಳಿತುಕೊಳ್ಳಿ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಎಲ್ಲವನ್ನೂ, ಎಲ್ಲರೂ ಹೇಳುವುದನ್ನು ನಾನು ಕೇಳಬೇಕಾಗುತ್ತದೆ. ದಯಮಾಡಿ ಕುಳಿತುಕೊಳ್ಳಿ. ಅವರಿಗೆ ಅವಕಾಶ ಮಾಡಿಕೊಡಿ. ನಾನು ಬಳಸಿದ ಶಬ್ದದ ಬಗ್ಗೆ ತಾವು ಏನು ಎತ್ತಿದ್ದೀರಿ, ಅದನ್ನು ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಒಂದು ತೀರ್ಪನ್ನು ಕೊಟ್ಟಿರಿ. ನಿಮ್ಮದೇನು ಇದ್ದರೂ ಹೊರಗಡೆ ಮಾಡಿಕೊಳ್ಳಿ, ಇಲ್ಲಿ ಬೇಡ ಎಂದು ನೀವು ಹೇಳಿದ ತಕ್ಷಣ, ಅವರು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಅಧ್ಯಕ್ಷರಿಗೆ ನೇರವಾಗಿ ಹೇಳತಕ್ಕಂಥ ಅಧಿಕಾರ ಇಲ್ಲಿರುವವರಿಗೆ ಯಾರಿಗೂ ಇಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಇದನ್ನು ಲಂಭಿಸತಕ್ಕಂಥ ಅಗತ್ಯವಿಲ್ಲ. ನಾನು ಈ ಸಭೆಯನ್ನು ನಡೆಸತಕ್ಕಂಥ ಸದುದ್ದೇಶದಿಂದ ಆ ಪದವನ್ನು ಬಳಸಿದ್ದೇನೆ. ಅದು ಸರಿಯಿಲ್ಲದಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳೋಣ. ಇಲ್ಲಿರುವುದು ಆ ಪ್ರಶ್ನೆಯಲ್ಲ. ತಾವು ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರಿಗೆ ಧನ್ಯವಾದಗಳು.

(ಗೊಂದಲ)

ಅಧ್ಯಕ್ಷರು : ನಾನು ಅದನ್ನು ಪರಿಶೀಲನೆ ಮಾಡುತ್ತೇನೆ, ತಾವು ದಯಮಾಡಿ ಕುಳಿತುಕೊಳ್ಳಿ, ಈಗಾಗಲೇ ಅರ್ಧಗಂಟೆಯಾಯಿತು.

ಶ್ರೀ ಬಸವರಾಜ ರಾಯರೆಡ್ಡಿ : ಸದನದ ಎಲ್ಲಾ ಸದಸ್ಯರ ಪರವಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ ಮೇಲೆ ಮುಗಿದು ಹೋಯಿತಲ್ಲಾ. ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರೆ ಸಾಕು, ಅದಕ್ಕೇಕೆ ಚರ್ಚೆ?

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಏಕೆ ಹೀಗೆ ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರಶ್ನೋತ್ತರ ನಡೆಯಬೇಕು ಎನ್ನುತ್ತೀರೋ, ನಡೆಯಬಾರದು ಎನ್ನುತ್ತೀರೋ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಸರಿಯಲ್ಲ. ಅವರು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ತಾವು ಆ ಪದವನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಅದು ಸಂಸದೀಯ ಪದ ಅಸಂಸದೀಯ ಅಲ್ಲ. ತಾವು ಅಧ್ಯಕ್ಷರು ಯಾರ ಒತ್ತಡಕ್ಕೆ...

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್, ಎಸ್. ರಾಜೇಂದ್ರನ್, ಜಿ.ವಿ. ಶ್ರೀರಾಮರೆಡ್ಡಿ ಹಾಗೂ ಭಾರತೀಯ ಜನತಾ ಪಕ್ಷದ ಕೆಲವು ಸದಸ್ಯರು ತಮ್ಮ ಸ್ಥಾನದಿಂದ ಎದ್ದು ಬಂದು ಸಭಾಧ್ಯಕ್ಷರ ಪೀಠದ ಮುಂದೆ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಅದನ್ನು ಪರಿಶೀಲನೆ ಮಾಡುವಂಥ ಅಧಿಕಾರ ನನಗಿಲ್ಲವೇ? ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದುದ್ದರಲ್ಲಿ ತಪ್ಪಿಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಅಧ್ಯಕ್ಷರ ಪೀಠದ ಮುಂದೆ ನಿಂತು ಮಾತನಾಡುತ್ತಿದ್ದರು.

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಯಾವುದೇ ಪಾಯಿಂಟ್ ಆಫ್ ಆರ್ಡರ್ ಇಲ್ಲ.

12.30 ಪಿಎಂ

(ಗೊಂದಲ)

ಅಧ್ಯಕ್ಷರು : ವಾಪಸ್ಸು ತೆಗೆದುಕೊಂಡಿಲ್ಲ. ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ Please co-operate.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಆಗಮಿಸಿದರು)

(ಗೊಂದಲ)

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ನೀವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಕಡೆಯ ಶಾಸಕರು ಈ ರೀತಿ ನಿಂತುಕೊಂಡಿದ್ದರೆ ನಾನು ಏನು ಮಾತನಾಡಲಿ. ಹೀಗಾದರೆ ಇನ್ನು ಏನು ಮಾತನಾಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ .....

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದ್ನಿಮಿಷ, ವಿರೋಧ ಪಕ್ಷದ ನಾಯಕನಾದ ನನಗೆ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ನಾನು ಮಾತನಾಡಿದ ಮೇಲೆ ತಾವು ಮಾತನಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವೇನಾದರೂ ಪ್ರಾರಂಭದಲ್ಲಿಯೇ ಆಡಳಿತ ಪಕ್ಷದವರು ಇರಬಹುದು, ಅಥವಾ ವಿರೋಧ ಪಕ್ಷದವರು ಇರಬಹುದು, ಅದರಲ್ಲೇನೂ ವ್ಯತ್ಯಾಸಗಳು ಇಲ್ಲ. ನಿಮ್ಮ ಪೀಠಕ್ಕೆ ಗೌರವ ಕೊಡತಕ್ಕಂಥದ್ದು ಬಹಳ ವರ್ಷಗಳ ಕಾಲದಿಂದ ಈ ಸತ್‌ಸಂಪ್ರದಾಯ ನಡೆದುಕೊಂಡು ಬಂದಿದೆ, ಅದಕ್ಕಾಗಿ ಇಲ್ಲಿ ಕಾರ್ಯಕಲಾಪಗಳು ನಡೆಯುತ್ತಿದೆ. ತಾವು ಈಗ ಹೇಳಿದಂಥ ಮಾತನ್ನು ನೀವೇ ದಾಖಲೆ ತೆಗೆಸಿ ನೋಡಿ. ರಾಜಕೀಯ ತೀಟೆ ತೀರಿಸಿಕೊಳ್ಳುವಂಥ ಕೆಲಸ ಯಾರೂ ಮಾಡಬೇಡಿಪ್ಪಾ ಈ ಸದನದಲ್ಲಿ ಒಳ್ಳೆಯ ಚರ್ಚೆಗಳು ಆಗಬೇಕು, ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಹೋಗಬೇಡಿ ಎನ್ನತಕ್ಕಂಥ ಮಾತನ್ನು ತಾವು ಹೇಳಿದಿರಿ. ಇವತ್ತು ಆ ಭಾಗದಿಂದ ಎದ್ದು ನಿಂತು ಮಾತನಾಡಿದ ಶ್ರೀ ರಾಯರೆಡ್ಡಿಯವರು ಯುವಕರಾಗಿದ್ದು ನಿನ್ನೆಮೊನ್ನೆ ಆಯ್ಕೆಯಾಗಿ ಬಂದಂಥವರು ಅಲ್ಲ. ಲೋಕಸಭೆಯಲ್ಲಿ ಇದ್ದವರು, ಅನುಭವ ಇರುವಂಥ ಸಾಕಷ್ಟು ಕಾನೂನಿನ ಮಾಹಿತಿ ಇರುವಂಥ ಮಂತ್ರಿಯಾಗಿದ್ದಂಥ ವ್ಯಕ್ತಿ. ಇಂಥ ಸಂದರ್ಭದಲ್ಲಿ ಅವರು ತಮ್ಮ ಬಗ್ಗೆ ಅಗೌರವ ತರುವ ರೀತಿಯಲ್ಲಿ ಮಾತನಾಡುವುದನ್ನು ನಾವು ಯಾರೂ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ...ನಾನು ಮಾತನಾಡಿ

ಮುಗಿಸುವವರೆಗೆ ತಡೆಯಿರಿ. ನೀವು ಮಂತ್ರಿಗಳಾಗಿದ್ದಂಥವರು ಕೈಬಾಯಿ ತೋರಿಸಿದರೆ ನಾನು ಅದೇ ಮಾಡಬೇಕಾಗುತ್ತದೆ. ಸರ್, ಅದಕ್ಕೋಸ್ಕರ ಯಾವುದೇ ಕಾರಣಕ್ಕೂ ತಾವು ಮಾತನಾಡಿದ್ದನ್ನು ವಾಪಸ್ಸು ತೆಗೆದುಕೊಳ್ಳಕೂಡದು.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ, ನೀವು ಏನು ತಪ್ಪು ಮಾಡಿದ್ದೀರಾ? ಇದು ಒಂದು. ಇನ್ನು ಎರಡನೆಯದು, ನಮ್ಮ ಸಂಸದೀಯ ಸಚಿವರು ಅನುಭವಸ್ಥರು ಇದ್ದಾರೆ, ಅವರು ಎದ್ದು ನಿಂತು ಕ್ಷಮಾಪಣೆ ಕೇಳಿ ಇನ್ನು ಮುಂದೆ ಈ ರೀತಿ ಮಾತನಾಡುವುದಿಲ್ಲವೆಂದು ಹೇಳಿಬಿಟ್ಟು ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡಲಿ, ನೀವು ಹೇಳಿರುವಂಥದ್ದು ದಾಖಲೆಯಲ್ಲಿರಬೇಕು. ಇಷ್ಟೇ ನಾನು ಹೇಳುವುದಕ್ಕೆ ಇಚ್ಛೆಪಡುವಂಥದ್ದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ದಯಮಾಡಿ ಕಡತವನ್ನು ತರಿಸಿ. ನಾನು ಏನು ಹೇಳಿದ್ದೇನೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ವಾದಬೇಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಪ್ರಕಾಶ್ ರವರು ಮಾತನಾಡುತ್ತಾರೆ ಅದನ್ನು ಕೇಳಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಒಂದು ಪದ ಬಳಕೆಯಾಗಿರುವಂಥ ಸಂದರ್ಭದಲ್ಲಿ ಅದನ್ನು ಅರ್ಥೈಸಿಕೊಳ್ಳತಕ್ಕಂಥ ರೀತಿಯಲ್ಲಿ ಅವರು ಪ್ರಾಯಶಃ ಅಧ್ಯಕ್ಷ ಪೀಠಕ್ಕೆ ಅಗೌರವವಾಗಿದೆ ಎನ್ನುವ ಕಾರಣಕ್ಕಾಗಿಯೇ ಕೆಲವು ಮಾನ್ಯ ಸದಸ್ಯರು ಭಾವೋದ್ವೇಗಕ್ಕೆ ಒಳಗಾಗಿದ್ದಾರೆ. ಬಹಳ ಉದ್ವೇಗ ಇರತಕ್ಕಂತ ಸದಸ್ಯರು ಅಂಥ ಕಠಿಣ ಶಬ್ಧವನ್ನು ಬಳಸಬಾರದು ಎನ್ನುವಂಥ ವಿಚಾರವನ್ನು ಮಾತನಾಡಿದರು. ತಾವು ಅಲ್ಲಿ ನಿಂತು ಮಾತನಾಡಿದ್ದು ಕೆಡತದಲ್ಲಿ ಬರುವುದಿಲ್ಲ. ... ಮಾನ್ಯ ಶಾಸಕರು ತಾವು ಹಿರಿಯರಿದ್ದೀರಿ, ತಾವು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಇಲ್ಲಿ ಸುಗಮವಾಗಿ ನಮ್ಮ ಕಾರ್ಯಕಲಾಪಗಳು ನಡೆಯಬೇಕಾಗಿರುವುದರಿಂದ ಒಂದು ವೇಳೆ ಮಾತಿನ ಭರದಲ್ಲಿ ಇಂಥ ಕಠಿಣ ಶಬ್ಧವನ್ನು ಬಳಸಬಾರದು ಎನ್ನತಕ್ಕಂಥ ಮಾತಿಗೆ ತಾವು ತತ್‌ಕ್ಷಣ ಪ್ರತಿಕ್ರಿಯೆ ಕೊಟ್ಟಿದ್ದೀರಿ. ಅದರಿಂದ ಮಾನ್ಯ ಸದಸ್ಯರುಗಳಿಗೆ ಅಧ್ಯಕ್ಷರ ಪೀಠದ ಬಗ್ಗೆಯೇ ನೀವು ಕೆಲವು ವಿಚಾರಗಳನ್ನು ಹೇಳತಕ್ಕಂಥದ್ದು ಸರಿಯಾದುದಲ್ಲ ಅಗೌರವ ಆಗುತ್ತದೆಂದರೆ ನಾವು ಅದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇವೆ. ಈ ವಿಷಾದವನ್ನು ವ್ಯಕ್ತಪಡಿಸುವುದರಿಂದ ಕಾರ್ಯಕಲಾಪಗಳು ಬಹಳ ಮುಖ್ಯವಾಗಿ ಇರುವ ಕಾರಣದಿಂದ ದಯವಿಟ್ಟು ತಾವು ಮುಂದಿನ ಕಾರ್ಯಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು)

ಅಧ್ಯಕ್ಷರು : ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಶ್ರೀ ಆಂಜನೇಯರವರು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಸರಿಯಾದ ಉತ್ತರ ನನಗೆ ಬಂದಿಲ್ಲ.

ಅಧ್ಯಕ್ಷರು : ಇದು ಮೊದಲನೇ ಪ್ರಶ್ನೆ. ಇನ್ನೂ ಬಹಳಷ್ಟು ಪ್ರಶ್ನೆಗಳಿವೆ. ದಯವಿಟ್ಟು ಸಹಕರಿಸಬೇಕು. ನೀವು ಹೀಗೆ ಮಾಡಿದರೆ ಹೇಗೆ? ಇನ್ನೂ ಅನೇಕ ಪ್ರಶ್ನೆಗಳಿವೆ. ಈ ತರಹ ಆದರೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಏನು ಈ ಕೆರೆ ಹೂಳನ್ನು ಎತ್ತಿದ್ದಾರೆ, ಅದರ ಯೋಜನೆಯಲ್ಲಿ ಆಗಿರತಕ್ಕಂಥ ಕೆಲಸದ ಪಟ್ಟಿಯನ್ನು ಇಲ್ಲಿ ಕೊಟ್ಟಿದ್ದಾರೆ. ಮತ್ತೆ ಈ ಕಾರ್ಯವನ್ನು ಕಾರ್ಯಾರಂಭ ಮಾಡಲಿಕ್ಕೆ ಅನೇಕ ಅಡ್ಡಿಆತಂಕಗಳು ಇವೆ. ಆ ಅಡ್ಡಿ ಆತಂಕಗಳನ್ನು ಸರಿಪಡಿಸಿಕೊಂಡು ಪುನಃ ಆ ಕಾರ್ಯಕ್ಕೆ ಹೊಸ ಚಾಲನೆ ಕೊಡಬೇಕೆನ್ನುವುದಾದರೆ ನಾವೆಲ್ಲರೂ ಕೂಡ ಒಂದು ಸರ್ವಾನುಮತದ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ನಮ್ಮ ಹಿರಿಯ ಸಚಿವರಾಗಿರತಕ್ಕಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವ್ಯಕ್ತಪಡಿಸಿದ್ದಾರೆ. ನಾವೆಲ್ಲ ಇಡೀ ಸದನದ ಸದಸ್ಯರುಗಳೂ ಕೂಡ ಹೇಳುತ್ತಿದ್ದೇವೆ, ಕೇಂದ್ರ ಸರ್ಕಾರದ ಮಾರ್ಗಸೂಚಿ ಯಾವುದಿದೆ,

ಅಧ್ಯಕ್ಷರು : ಇದು ಚರ್ಚೆಯಲ್ಲ, ಪ್ರಶ್ನೆ ಏನು ಕೇಳಬೇಕೋ ಅದನ್ನು ನೇರವಾಗಿ ಕೇಳಿ.

ಶ್ರೀ ಹೆಚ್. ಆಂಜನೇಯ : ಆದ್ದರಿಂದ ದಯವಿಟ್ಟು ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಬಿಡುಗಡೆಯಾಗಿರತಕ್ಕಂಥ ಹಣ ಏನಿದೆ ಏನು ಕೆರೆಗಳ ಹೂಳು ಎತ್ತುವ ಕಾರ್ಯ ಸ್ಥಗಿತವಾಗಿದೆ ಕೂಡಲೇ ಆ ಕಾರ್ಯಾರಂಭಕ್ಕೆ ಮಾಡಲಿಕ್ಕೆ ನಿಮ್ಮ ಸಂಬಂಧಪಟ್ಟ ಇಲಾಖೆಗೆ ಸೂಚನೆಯನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಆಗ್ರಹ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಜ. ಅವರು ಹೇಳಿದ ಹಾಗೆ ಎಲ್ಲಾ ಕಡೆ ಇಡೀ 176–177 ತಾಲ್ಲೂಕುಗಳಲ್ಲಿ ಈ ಕೆಲಸ ಸ್ಥಗಿತವಾಗಿದೆ. ಕಾರಣ ಇಷ್ಟೆ, ಇತ್ತೀಚೆಗೆ ತಾವೆಲ್ಲರೂ ಪತ್ರಿಕೆಯಲ್ಲಿ ಓದಿದ ಹಾಗೆ, ಕೂಲಿಗಾಗಿ ಕೊಟ್ಟಂಥ ಕಾಳು ದುರುಪಯೋಗವಾಗಿದೆ ಮಿಸ್–ಯೂಸ್ ಆಗಿದೆ ಎನ್ನುವ ಕಾರಣದಿಂದ ಮತ್ತು ಅದರಲ್ಲಿ ಅನೇಕ ಕಾರಣಗಳಿರಬಹುದು. ಅದು ಪಿಡಿಎಸ್, ಎಸ್‌ಜಿಎಸ್‌ಆರ್‌ವೈ, ಕೂಲಿಗಾಗಿ ಕಾಳು ಇರಬಹುದು ಅಥವಾ ಕೂಲಿ ಮಾಡುವವರು ಅರ್ಧ ಮಾರ್ಕೆಟ್‌ಗೆ ಮಾರಿ, ಅರ್ಧ ಇಟ್ಟುಕೊಂಡ ಉದಾಹರಣೆ ಇರಬಹುದು. ಆದರೆ, ಒಟ್ಟಾರೆ ಇಲಾಖೆಯಲ್ಲಿ ಒಂದು ಫಿಯರ್ ಕಾಂಪ್ಲೆಕ್ಸ್ ಬೆಳೆದಿದೆ. ಅದಕ್ಕಾಗಿ ಒಬ್ಬರೂ ಮುಂದೆ ಬರುತ್ತಿಲ್ಲ. ಇವತ್ತು ಕ್ಯಾಬಿನೆಟ್ ಸಬ್–ಕಮಿಟಿ ಮೀಟಿಂಗ್ ಇದೆ. ಮಾನ್ಯ ಪ್ರಕಾಶ್‌ರವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಈ ಕೂಲಿಗಾಗಿ ಕಾಳು ಮತ್ತು ನ್ಯಾಚುರಲ್ ಕ್ಯಾಲಾಮಿಟಿ ಫಂಡ್ ಎರಡೂ ಸೇರಿ, ಯಾವ ರೀತಿಯಾಗಿ ಅದನ್ನು ಉಪಯೋಗ ಮಾಡಿಕೊಳ್ಳಬೇಕೆನ್ನುವುದರ ಬಗ್ಗೆ ಬಹುಶಃ ಅವರು ಮೀಟಿಂಗ್ ಮಾಡಿ ಒಂದು ನಿರ್ಣಯಕ್ಕೆ ಬರಬಹುದು ಎಂದು ನನಗನ್ನಿಸುತ್ತದೆ ಮತ್ತು ಬೇಗನೆ ಬರುವ ಅವಶ್ಯಕತೆ ಇದೆ. ಅವರೂ ಕೂಡ ಇಲ್ಲೇ ಇದ್ದಾರೆ. ಅವರು ಸ್ಪಷ್ಟಪಡಿಸುತ್ತಾರೆ. ನಾನು ಇಷ್ಟೇ ಕಳಕಳಿಯ ಮನವಿ ಮಾಡುವುದು,

ಕೇಂದ್ರಸರ್ಕಾರದ್ದಾಗಲಿ, ರಾಜ್ಯಸರ್ಕಾರದ್ದಾಗಲಿ, ಯಾವುದೇ ಹಣ ಬಂದಿದ್ದನ್ನು ನಾವು ಸದುಪಯೋಗ ಮಾಡಿಕೊಳ್ಳಬೇಕು ಮತ್ತು ಅನೇಕ ಸಾರಿ ನಾವು ಕುಳಿತು ಸಣ್ಣಪುಟ್ಟ ಲೋಪದೋಷಗಳಿದ್ದರೆ, ಅದನ್ನು ಅಧಿಕಾರಿಗೆ ಹೇಳಿ ಸರಿಪಡಿಸುವುದೂ ಕೂಡ ಆಗಬೇಕು. ಇಲ್ಲದಿದ್ದರೆ, ಒಂದು ಕೆಲಸವೂ ಆಗುವುದಿಲ್ಲ. ನಾವೆಲ್ಲರೂ ಚುನಾವಣೆಗೆ ಹೋಗಿದ್ದೇವೆಂದು ಹೇಳಿ, ಅಧಿಕಾರಿಗಳೇ ಇದ್ದರು. ಫೆಬ್ರವರಿಯಿಂದ ಇಲ್ಲಿಯವರೆಗೆ ಹೆಚ್ಚು ಕಡಿಮೆ ಆರು ತಿಂಗಳು ಯಾವ ಕೆಲಸವೂ ಆಗಿಲ್ಲ. ಅವರು ಮಾಡಿದ್ದೇ ರಾಜ್ಯವಾಯಿತು. ಅದಕ್ಕೆ ಇದನ್ನು ತಕ್ಷಣ ತೆಗೆದುಕೊಳ್ಳುವುದಿದೆ. ನಾನೂ ಕೂಡ ಅವರಿಗೆ ಹೇಳುತ್ತೇನೆ. ಈ ಹಿಂದೆ ಕೆರೆಗಳಿಗೆ ಒತ್ತು ಏಕೆ ಕೊಟ್ಟಿದ್ದೇವೆಂದರೆ, ಬಡ್ಡೆಟರಿ ಪ್ರಾವಿಸನ್ ಸಣ್ಣ ನೀರಾವರಿಗೆ : ಬಹಳ ಕಡಿಮೆಯಿತ್ತು. ಅದಕ್ಕೆ ನಾವು ಕ್ಯಾಬಿನೆಟ್‌ಗೆ ಮೊರೆ ಹೋಗಿ ಸ್ಕೇರ್‌ಸಿಟಿ ಅಮೌಂಟ್ ಮತ್ತು ನಮ್ಮ ಇಲಾಖಾ ಅಮೌಂಟ್ ಅನ್ನು ಕೂಡ ಅದಕ್ಕೆ ಖರ್ಚು ಮಾಡಿ, ಆದಷ್ಟೂ ಕೆರೆಗಳನ್ನು ದುರಸ್ತಿ ಮಾಡಬೇಕೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ 4,5,6,10,20 ಕೆರೆಗಳು ದುರಸ್ತಿಯಾಗಬೇಕು. ಬಹುಶಃ ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ದುರಸ್ತಿ ಮಾಡುವ ಕೆಲಸ ಹಿಂದೆಂದೂ ಕೂಡ ಆಗಿರಲಿಲ್ಲ. ಪುನಃ ಇದನ್ನು ಅವರು ದುರಸ್ತಿ ಮಾಡಬೇಕು. ನನಗನ್ನಿಸಿದಮಟ್ಟಿಗೆ, ಯಾವ್ಯಾವ ತಾಲ್ಲೂಕಿನಲ್ಲಿ ಏನು ಶಾಸಕರು ಇರುತ್ತಾರೋ, ಆ ಸಂಬಂಧಪಟ್ಟ ಶಾಸಕರನ್ನೂ ಕೂಡ ಕೇಳಿಕೊಂಡು ಪುನಃ ಟಾಸ್ಕ್‌ಫೋರ್ಸ್ ಕಮಿಟಿ ಮಾಡಿ, ಕೆಲಸ ಚಾಲನೆಯಲ್ಲಿದ್ದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಸುಮಾರು ಒಂದು ಲಕ್ಷ ನಲವತ್ತು ಸಾವಿರ ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಒಬ್ಬ ಅಧಿಕಾರಿಯೂ ಎತ್ತುತ್ತಿಲ್ಲ. ಇದಕ್ಕೆ ಎತ್ತುವ ಹಾಗೆಯೂ ಮಾಡಬೇಕು ಮತ್ತು ಖರ್ಚೂ ಆಗಬೇಕು ಮತ್ತು ನಮಗೆ ಸಿಕ್ಕ 40 ಕೋಟಿ ರೂಪಾಯಿ ಉಳಿತಾಯವಾಗಿದ್ದೂ ಕೂಡ ಮಾರ್ಚಿ ತಿಂಗಳಲ್ಲಿ, ಎಲ್ಲರೂ ಚುನಾವಣೆಯಲ್ಲಿದ್ದ ಕಾರಣ, ಆ ಹಣ ಕೂಡ ಹೆಚ್ಚಿನ ರೀತಿಯಲ್ಲಿ ಉಪಯೋಗವಾಗಲಿಲ್ಲ. ಕೊನೆಗೆ, ತೊಂದರೆಯಾಗಿದೆ. ಒಟ್ಟಾರೆ, ತಾವು ಹೇಳಿದ ಸಲಹೆ ಉತ್ತಮವಾಗಿದೆ. ಅದಕ್ಕೆ ರೆವಿನ್ಯೂ ಸಚಿವರು ಸ್ಪಂದಿಸಿ, ಆದಷ್ಟು ಬೇಗನೆ ನಿರ್ಣಯ ತೆಗೆದುಕೊಳ್ಳುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ.

ಅಫಜಲ್‌ಪುರ ತಾಲ್ಲೂಕಿನಲ್ಲಿ ಭೀಮಾ ನದಿಗೆ ಬ್ಯಾರೇಜ್ ನಿರ್ಮಾಣ

32 (177): ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿ ಭೀಮಾ ನದಿಯ ಮೇಲೆ ದೇವಲಗಾಣಗಾಪುರ ಹತ್ತಿರ ಬ್ಯಾರೇಜನ್ನು ಯಾವಾಗ ನಿರ್ಮಿಸಲಾಗುವುದು;

ಆ) ಅದರ ಅಂದಾಜು ವೆಚ್ಚು ಎಷ್ಟು; ಮತ್ತು ಎಷ್ಟು ಎಕರೆ ಭೂಮಿಗೆ ಅನುಕೂಲವಾಗುವುದು;

ಇ) ಮೂರು ಸಲ ಅಂದಾಜು ವೆಚ್ಚ ಹೆಚ್ಚಿಸಿರುವುದು ನಿಜವೇ;

ಈ) ಪ್ರಾರಂಭದ ವೆಚ್ಚ ಮತ್ತು ಈಗಿನ ವೆಚ್ಚ ಎಷ್ಟು;

ಉ) ಈ ಕೆಲಸದ ಗುತ್ತಿಗೆದಾರರು ಕೆಲಸ ಮಾಡದೆ ತಡೆಯೊಡ್ಡುವುದನ್ನು ನಿರ್ಬಂಧಿಸಲು ಇವರನ್ನು ಕಪ್ಪುಪೆಟ್ಟಿಗೆ ಸೇರಿಸಲಾಗುವುದೆ?